# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಗುರುವಾರ, ೨೯, ಜನವರಿ, ೨೦೨೬ ( ಮಾಘ , ೦೯, ಶಕವರ್ಷ, ೧೯೪೭)<br>BENGALURU, THURSDAY, 29, JANUARY, 2026 ( MAGHA , 09, SHAKAVARSHA, 1947) | ನಂ. ೧೧೭<br>No. 117 |
|---|---|---|

## <u>ಕರ್ನಾಟಕ ಸರ್ಕಾರ</u>

ಸಂಖ್ಯೆ:ಗ್ರಾಅಪ 350 ಜಿಪಸ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:29.01.2026.

## <u>ಅಧಿಸೂಚನೆ</u>

ನಗರಾಭಿವೃದ್ಧಿ ಇಲಾಖೆಯು, ವಿಜಯಪುರ ಜಿಲ್ಲೆಯ, ವಿಜಯಪುರ ಮತ್ತು ತಿಕೋಟಾ ತಾಲ್ಲೂಕುಗಳ ಕೆಲವು ಗ್ರಾಮಗಳನ್ನು, ನಗರ ಸ್ಥಳೀಯ ಸಂಸ್ಥೆಗಳಿಗೆ ಸೇರ್ಪಡೆಗೊಳಿಸಿ ಆದೇಶಿಸಿರುತ್ತದೆ, ಅದರನ್ವಯ ಸದರಿ ತಾಲ್ಲೂಕಿನ ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಗಳನ್ನು ಮರು ನಿಗದಿಪಡಿಸಬೇಕಾಗಿರುತ್ತದೆ. ಆದುದರಿಂದ ಸರ್ಕಾರವು ದಿನಾಂಕ:16-12-2023ರಂದು ಹೊರಡಿಸಿದ್ದ ಅಧಿಸೂಚನೆಯಲ್ಲಿನ, ವಿಜಯಪುರ ಜಿಲ್ಲೆಯ ವಿಜಯಪುರ ಮತ್ತು ತಿಕೋಟಾ ತಾಲ್ಲೂಕುಗಳ ಜಿಲ್ಲಾ ಪಂಚಾಯಿತಿಯ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದು ದಿನಾಂಕ:06.01.2026ರಂದು ಆದೇಶಿಸಿದೆ.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 308-ಇ ರಡಿ ರಚಿತವಾಗಿರುವ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು, ಅಧಿನಿಯಮದ ಪ್ರಕರಣ 308-ಎಫ್ ರಡಿಯಲ್ಲಿನ ಉಪಬಂಧಗಳನುಸಾರ ವಿಜಯಪುರ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ವಿಜಯಪುರ ಮತ್ತು ತಿಕೋಟಾ ತಾಲ್ಲೂಕುಗಳಿಂದ ಆಯ್ಕೆಯಾಗುವ ಜಿಲ್ಲಾ ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಹಾಗೂ ವಿಜಯಪುರ ಮತ್ತು ತಿಕೋಟಾ ತಾಲ್ಲೂಕುಗಳ ಜಿಲ್ಲಾ ಪಂಚಾಯಿತಿ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶವನ್ನು ಅನುಕ್ರಮವಾಗಿ **4** ಮತ್ತು **3** ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ, ಅವುಗಳ ಸೀಮಾ/ಗಡಿಯನ್ನು ನಿರ್ಣಯಿಸಿ, ಶಿಫಾರಸ್ಸು ವರದಿಯನ್ನು 27.01.2026ರಂದು ಸಲ್ಲಿಸಿರುತ್ತದೆ.

ಈ ಶಿಫಾರಸ್ಸು ವರದಿಯನ್ನು ಸರ್ಕಾರವು ಅಂಗೀಕರಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 160, 161 ಹಾಗೂ 163ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ವಿಜಯಪುರ ಜಿಲ್ಲೆಯ ವಿಜಯಪುರ ಮತ್ತು ತಿಕೋಟಾ ತಾಲ್ಲೂಕುಗಳ ಜಿಲ್ಲಾ ಪಂಚಾಯಿತಿಯ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **"ಅ"** ರಂತೆ ಹಾಗೂ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರು ಮತ್ತು ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳನ್ನು ಕೋಷ್ಟಕ **"ಆ"** ರಂತೆ ನಿಗದಿಪಡಿಸಿ ಆದೇಶಿಸಿದೆ.

## ಕೋಷ್ಟಕ "ಅ"

| ವಿಜಯಪುರ ಜಿಲ್ಲೆ | | |
|---|---|---|
| **ಕ್ರ. ಸಂ.** | **ತಾಲ್ಲೂಕಿನ ಹೆಸರು** | **ಜಿಲ್ಲಾ ಪಂಚಾಯತಿಯ ಸದಸ್ಯರ ಸಂಖ್ಯೆ** |
| **1** | **2** | **3** |
| | ವಿಜಯಪುರ | 4 |
| | ತಿಕೋಟಾ | 3 |

## ಕೋಷ್ಟಕ "ಆ"

| ವಿಜಯಪುರ ಜಿಲ್ಲೆ | | | |
|---|---|---|---|
| **ಕ್ರ ಸಂ** | **ತಾಲ್ಲೂಕಿನ ಹೆಸರು** | **ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು** | **ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು** |
| **1** | **2** | **3** | **4** |
| **1** | **ವಿಜಯಪುರ** | 14-ಕನ್ನೂರ | ಕನ್ನೂರ, ಮಡಸನಾಳ, ಮಖಣಾಪೂರ, ಶಿರನಾಳ, ನರಸಿಂಹ ನಗರ (ಮಖಣಾಪೂರ ಎಲ್ ಟಿ), ಡೊಮನಾಳ, ಕನ್ನಾಳ, ಗುಣಕಿ, ಮಿಂಚನಾಳ, ರಾಮನಗರ (ಮಿಂಚನಾಳ ಎಲ್ ಟಿ), ತಿಡಗುಂದಿ, ಬೊಮ್ಮನಳ್ಳಿ. |
| **2** | ವಿಜಯಪುರ | 15-ನಾಗಠಾಣ | ನಾಗಠಾಣ, ಹುಣಶ್ಯಾಳ, ಜಂಬಗಿ (ಆ), ಹೊನ್ನಳ್ಳಿ, ದ್ಯಾಬೇರಿ, ಅಲಿಯಾಬಾದ, ಇಂಗನಾಳ, ಗೂಗದಡ್ಡಿ, ಆಹೇರಿ (ಜ), ಅಂಕಲಗಿ. |
| **3** | ವಿಜಯಪುರ | 16-ಶಿವಣಗಿ | ಶಿವಣಗಿ, ಮದಭಾವಿ, ಕವಲಗಿ, ರಾಜಾಜಿ ನಗರ (ಮದಭಾವಿ ಎಲ್ ಟಿ), ಇಂದಿರಾನಗರ(ಶಿವಣಗಿ ಎಲ್ ಟಿ), ಹೊನ್ನೂಟಗಿ, ಲಾಲಬಾಹಾದ್ದೂರ ಶಾಸ್ತ್ರೀ ನಗರ (ಕುಮಟಗಿ ಎಲ್ ಟಿ), ಕುಮಟಗಿ, ಹಡಗಲಿ, ಮಹತ್ಮಾ ಗಾಂಧಿ ನಗರ (ಹಡಗಲಿ ಎಲ್ ಟಿ) ಕಗ್ಗೋಡ. |
| **4** | ವಿಜಯಪುರ | 17-ಜುಮನಾಳ | ಜುಮನಾಳ, ಐನಾಪೂರ, ಬೂರಣಾಪೂರ, ಹಿಟ್ನಳ್ಳಿ, ಉತ್ನಾಳ, ಚಿಂತಾಮಣಿ ನಗರ (ಉತ್ನಾಳ ಎಲ್ ಟಿ), ಹೆಗಡಿಹಾಳ, ಬಸವನಗರ (ಹೆಗಡಿಹಾಳಎಲ್ ಟಿ), ಕತಕನಹಳ್ಳಿ, ಉಕುಮನಾಳ, ಖತಿಜಾಪೂರ, ಹೊನಗನಹಳ್ಳಿ, ಸವನಹಳ್ಳಿ. |
| **5** | **ತಿಕೋಟಾ** | 21-ಅರಕೇರಿ | ಅರಕೇರಿ, ಅರಕೇರಿ ಸಿದ್ದಾಪೂರ(ಅ), ಬರಟಗಿ, ಹಂಚಿನಾಳ ಪಿ.ಎಚ್, ಜಾಲಗೇರಿ, ಯತ್ನಾಳ, ಟಕ್ಕಳಕಿ, ಹುಬನೂರ, ಇಂದಿರಾನಗರ. |
| **6** | ತಿಕೋಟಾ | 22-ಕನಮಡಿ | ಕನಮಡಿ, ಬಾಬಾನಗರ, ಅಳಗಿನಾಳ, ಬಿಜ್ಜರಗಿ, ಘೋಣಸಗಿ, ಕಳ್ಳಕವಟಗಿ, ಸಿದ್ದಾಪುರ ಕೆ, ಮಲಕನದೇವರಹಟ್ಟಿ, ಸೋಮದೇವರ ಹಟ್ಟಿ, ಧನರ್ಗಿ. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



| ವಿಜಯಪುರ ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 | 4 |
| 7 | ತಿಕೋಟಾ | 23- ಹೊನವಾಡ | ಹೊನವಾಡ, ಲೋಹಗಾಂವ, ಇಟ್ಟಂಗಿಹಾಳ, ಸೇವಾಲಾಲನಗರ, ತೊರವಿ ಅತ್ತಾಲಟ್ಟಿ, ತೊರವಿ ಪಾರ್ಟ, ನವರಸಪೂರ, ತಾಜಪುರ.ಎಚ್, ಹರನಾಳ, ಕೊಟ್ಯಾಳ, ರತ್ನಾಪುರ . |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತುಪಂ. ರಾಜ್ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH